ಅವು ಚಕ್ರಕ್ಕೆ ಸಿಲುಕುವ ಸನ್ನಿವೇಶ ಬಂದರೆ, ಗಾಳಿಯಲ್ಲಿ ಹಾರಿಯಾದರೂ ಪ್ರಾಣ ಉಳಿಸಿಕೊಳ್ಳುತ್ತವೆ. ಈಚೆಗೆ ದುಬಾರಿಯೂ ಅಪರೂಪವೂ ಆಗುತ್ತಿರುವ ಈ ದೇಶೀ ಕುಕ್ಕುಟಗಳ ಸಂತತಿ ಸಾವಿರವಾಗಲಿ.

ನಿಜಕ್ಕೂ ಅಪಾಯಕರ ಎಂದರೆ ಹಂದಿಗಳು. ಅವುಗಳ ಒಡೆಯರು ಯಾರೊ ಎಲ್ಲಿರುತ್ತಾರೊ ಎಲ್ಲವೂ ರಹಸ್ಯ. ಅವು ಹಾನಿ ಮಾಡಿದಾಗ ಯಾರಿಗೆ ಫಿರ್ಯಾದು ಸಲ್ಲಿಸಬೇಕೆಂದೇ ತಿಳಿಯುವುದಿಲ್ಲ. ಈ ಭಾಗದಲ್ಲಿ ಅವುಗಳ ಸಂಖ್ಯೆ ವಿಪರೀತವಾಗಿರಲು, ವರಾಹವು ವಿಜಯನಗರದ ರಾಜಚಿಹ್ನೆಯಾಗಿದ್ದುದೇ ಕಾರಣವೆಂದು ಕೆಲವರು ಹೇಳುವುದುಂಟು. ನಿಜವಾದ ಕಾರಣ ಅದಲ್ಲ. ಅವಕ್ಕೆ ಬೇಕಾದ ಆಹಾರ ಸರಪಳಿಗೂ ಈ ಭಾಗದ ಜೀವನ ವಿಧಾನಕ್ಕೂ ಯಾವುದೊ ಆತ್ಮೀಯ ಸಂಬಂಧವಿದ್ದಂತಿದೆ. ನಿರಂಕುಶಮತಿಗಳಾದ ಇವು, ಶತ್ರುಪಾಳ್ಯವನ್ನು ಶೂರಸೈನಿಕ ಕೆಚ್ಚೆದೆಯಿಂದ ನುಗ್ಗುವಂತೆ, ಜಾಲಿಯ ಪೊದೆಯೊಳಗಿಂದ ಚಿಮ್ಮಿ ರೋಡಿಗೆ ಧಾವಿಸುತ್ತವೆ. ಚಾಲಕರ ಪಾಲಿಗೆ ಭಯೋತ್ಪಾದಕವಾಗಿರುವ ಇವಕ್ಕೆ, ಬಸ್ಸು ಲಾರಿಗಳಿಗಿಂತಲೂ ದ್ವಿಚಕ್ರ ವಾಹನಗಳ ಮೇಲೆ ವಿಶೇಷ ಮಮತೆ; ಗಾಡಿಯನ್ನು ಸ್ಕಿಡ್ ಮಾಡಿಸಿ 'ಹೊಂಯ್ಕ್' ಎಂದು ಅರಚಿಕೊಂಡು ಓಡುವುದರಲ್ಲಿ ಎಂತಹುದೊ ಆನಂದ. ಒಮ್ಮೆ ಹಂಪಿ ಉತ್ಸವದ ಸಂಗೀತ ಕಾರ್ಯಕ್ರಮಕ್ಕೆಂದು ಬಾನುವನ್ನು ಕೂರಿಸಿಕೊಂಡು ಅವಸರದಲ್ಲಿ ಹೋಗುತ್ತಿದ್ದೆ. ಚರಿಗೆ ಹಿಡಿದು ಪೊದೆಯಲ್ಲಿ ಕೂತ ಯಾರೊ ಮಹಾಶಯರು ಒಡಿಗೆ ಬೀಸಿರಬೇಕು, ಬೆದರಿದ ಸೂಕರವೊಂದು ಶರವೇಗದಲ್ಲಿ ಅಡ್ಡಬಂದಿತು. ಬಾಳಿನ ಏಳುಬೀಳುಗಳಲ್ಲಿ ಜತೆಗೂಡಿ ಇರಬೇಕೆಂಬ ಸಂಕಲ್ಪ ಮಾಡಿರುವ ನಾವು ಒಟ್ಟಿಗೆ ಕತ್ತರಿಸಿಕೊಂಡು ಬಿದ್ದೆವು. ಕೈ ತರಚಿತು. ಮೊಣಕಾಲು ಚಿಪ್ಪಿಗೆ ಮೂಗೇಟು ಬಿದ್ದಿತು. ಮೂರು ತಿಂಗಳ ಕಾಲ ನಮ್ಮ 'ನಡತೆ'ಯ ಗತಿಯೇ ಬದಲಾಯಿತು. ಈಗಲೂ ಹೊಸಪೇಟೆ, ಬಳ್ಳಾರಿ, ಗಂಗಾವತಿ, ಕಂಪ್ಲಿ ಭಾಗದಲ್ಲಿ, ಯಾರಾದರೂ ಕೈಗೆ ಬ್ಯಾಂಡೇಜು ಹಾಕಿಕೊಂಡೊ ಕಾಲನ್ನು ವಿಚಿತ್ರವಾಗಿ ಎಳೆದುಕೊಂಡೊ, ವಿಜಯನಗರ ಯುದ್ಧದಲ್ಲಿ ಗಾಯಗೊಂಡ ಸೈನಿಕರಂತೆ ನಡೆಯುತ್ತಿದ್ದರೆ, ಅವರು ವರಾಹಾಘಾತಕ್ಕೆ ಸಿಲುಕಿದವರು ಎಂದು ನಿಶ್ಶಂಕೆಯಿಂದ ಹೇಳಬಹುದು.

## 4

ಹಂಪಿರೋಡಿನ ಹಳ್ಳಿಗಳಲ್ಲಿ ಕಷ್ಟ ಕೋಟಲೆಗಳು ಮಾತ್ರ ಇವೆಯೆಂದು ಭಾವಿಸಬೇಕಿಲ್ಲ. ನೂರಾರು ಮುದನೀಡುವ ದೃಶ್ಯಗಳೂ ಇವೆ. ಒಮ್ಮೊಮ್ಮೆ ಇಡೀ ರಸ್ತೆ ಸಾಂಸ್ಕೃತಿಕ ಕಾರ್ಯಕ್ರಮಗಳ ಸರಮಾಲೆ ಅನಿಸುವುದುಂಟು. ಇಲ್ಲಿ ಹಲವಾರು ಗುಡಿ, ಚರ್ಚು, ದರ್ಗಾ ಮಸೀದಿಗಳಿದ್ದು, ಜತೆ ಎರಡು ಸುಡುಗಾಡುಗಳೂ ಇವೆ. ಇವುಗಳ ದೆಸೆಯಿಂದ– ಡೊಳ್ಳು ಬಾರಿಸಿಕೊಂಡು ತಲೆಗೆ ಹೂಕವಚ ಧರಿಸಿ ಗುಡಿಗೆ ಹೋಗುವ ಕಳಸಗಿತ್ತಿಯರು; ಕೆನಾಲಿನಲ್ಲಿ ಮಿಂದು ಒದ್ದೆ ಬಟ್ಟೆಯಲ್ಲಿ ದೀಡ್ ನಮಸ್ಕಾರ ಹಾಕುತ್ತ ಗುಡಿಗೆ ಹೋಗುವ ಭಕ್ತರು; ಅವರ ನಡುವೆ ಹಾರ ಹಾಕಿಸಿಕೊಂಡು, ಮೈಗೆ ರಂಗು ಲೇಪಿಸಿಕೊಂಡು, ಎಲೆಕ್ಷನ್ ಗೆದ್ದು ಎಣಿಕೆ ಕೇಂದ್ರದಿಂದ ಹಿಂತಿರುಗುತ್ತಿರುವ ಅಭ್ಯರ್ಥಿಯಂತೆ ಸಾಗುವ ಟಗರುಗಳು; ಟ್ರ್ಯಾಕ್ಟರಿನ ಮಂಚಿಕೆಯಲ್ಲಿ ಆಸೀನರಾಗಿ ಸಾರ್ವಜನಿಕರಿಗೆ ಉಚಿತ ದರ್ಶನ ಕೊಡುವ ಮದುಮಕ್ಕಳು; ತುಂಗಭದ್ರಾ ಹೊಳೆಯಲ್ಲಿ ಗಂಗಾಸ್ನಾನ ಮಾಡಿಸಲು ಓಟದಲ್ಲಿ ಸಾಗುವ ದೇವರ ಪಲ್ಲಕ್ಕಿಯ ಅಡ್ಡೆಕಾರರು; ಅಲ್‌ಬಿದಾ ಹಾಡುತ್ತ ಪೀರಲ ದೇವರನ್ನು ಹೊಳೆಗೆ ಒಯ್ಯುವ ಶೋಕಭಾವದ ಭಕ್ತರು; ಅಯ್ಯಪ್ಪನಿಗೆ ಹೋಗುವವರನ್ನು ಬೀಳ್ಕೊಡುವವರು; ಮಳೆ ಬರಲೆಂದು ಊರಮ್ಮನಿಗೆ ಭಕ್ಷ್ಯಗಳ ಸಮೇತ ಗಡಿಪಾರು ಮಾಡುವವರು; ದಿವಂಗತರು ಬೆಚ್ಚಿಬಿದ್ದು ಏಳುವಂತೆ 'ಪಟಾಕ್ಷಿ' ಸಿಡಿಸುವ ಶವದ ಮೆರವಣಿಗೆಕಾರರು–ಹೀಗೆ ಏನಾದರೊಂದು ಜನೋತ್ಸವ ಅಡ್ಡಬಂದೇ ತೀರುತ್ತದೆ.